**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ: 47/2024**

ಪಿ.ಡಬ್ಲುಃ 12 ಸಿ.ಡಬ್ಲ್ಯುಃ 17

| | | |
|---|---|---|
| ಸಾಕ್ಷಿಯ ಹೆಸರು | : | ತಿಪ್ಪೆಸ್ವಾಮಿ |
| ತಂದೆಯ ಹೆಸರು | : | ಹನುಮಪ್ಪ |
| ವಯಸ್ಸು | : | 28 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಗುರುನಾಯಕನಹಳ್ಳಿ. |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 11.08.2026.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

1) ನನಗೆ 5 ನೇ ಆರೋಪಿಯ ಪರಿಚಯವಿಲ್ಲ. 5 ನೇ ಆರೋಪಿಯ ಬಳಿ ಮೋಟಾರ್ ಸೈಕಲ್ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲ. ನಾನು ಈ ಪ್ರಕರಣದಲ್ಲಿ ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅವರ ವಾದವನ್ನು ಕೇಳಿ, ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).

ಪಾಟೀ ಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

2) 5 ನೇ ಆರೋಪಿ ನನ್ನ ಹೆಂಡತಿಯ ತಮ್ಮ ಎಂದರೆ ಸರಿಯಲ್ಲ. ನಾನು 5 ನೇ ಆರೋಪಿಗೆ ಬೈಕ್ ನಂಬರ್ ಕೆ.ಎ 34/ಜೆ-0292 ಅನ್ನು ಬಳ್ಳಾರಿಯ ಶಾಂಬಶಿವರಾಮ್ ರವರಿಂದ ಮಧ್ಯವರ್ತಿಯಾಗಿ ರೂ.10,000/- ಕೊಡಿಸಿದ್ದೆ ಎಂದರೆ ಸರಿಯಲ್ಲ. 5 ನೇ ಆರೋಪಿಯು ಸದರಿ ಬೈಕನ್ನು ಉಪಯೋಗಿಸುತ್ತಿದ್ದ ಎಂದರೆ ಸರಿಯಲ್ಲ. ಸದರಿ ಬೈಕ್

ನೊಂದಣಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೊಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ ದಿನಾಂಕ 24.04.2024 ರಂದು "ಆದ ನಾನು ಮೇಲಿನ ವಿಳಾಸದಲ್ಲಿ ----- ರಿಜಿಸ್ಟ್ರೇಷನ್ ಮಾಡಿಸಿರಲಿಲ್ಲ"ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-25 ಎಂದು ಗುರುತಿಸಲಾಯಿತು. ನಿಪಿ-25 ರಂತೆ ನಾನು ಹೇಳಿಕೆ ಕೊಟ್ಟಿದ್ದರು ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಮಾಹಿತಿ ಇದ್ದರು ಸಹ 5 ನೇ ಆರೋಪಿ ನನ್ನ ಅಳಿಯನಾಗಿರುವುದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಆರೋಪಿ ಪರ ಪಾಟೀ ಸವಾಲು ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.